International Journal of Kannada Research
www.kannadajournal.com

**ISSN: 2454–5813**
IJKR 2019; 5(1): 148-150
© 2019 IJKR
www.kannadajournal.com
Received: 06-11-2018
Accepted: 10-12-2018

**ಸೌಮ್ಯ ಎಚ್.ಎಲ್.**
ಸಹಾಯಕ ಪ್ರಾಧ್ಯಾಪಕಿ, ಕನ್ನಡ ವಿಭಾಗ. ನ್ಯೂ ಹಾರಿಜನ್ ಕಾಲೇಜು ಮಾರತ್ತಹಳ್ಳಿ, ಬೆಂಗಳೂರು.

**Correspondence**
**ಸೌಮ್ಯ ಎಚ್.ಎಲ್.**
ಸಹಾಯಕ ಪ್ರಾಧ್ಯಾಪಕಿ, ಕನ್ನಡ ವಿಭಾಗ. ನ್ಯೂ ಹಾರಿಜನ್ ಕಾಲೇಜು ಮಾರತ್ತಹಳ್ಳಿ, ಬೆಂಗಳೂರು.

# ಮಹಿಳೆ ಮತ್ತು ಮಾಧ್ಯಮ

**ಸೌಮ್ಯ ಎಚ್.ಎಲ್.**

ಮಾಧ್ಯಮವು ಇಂದು ಪ್ರಜಾಪ್ರಭುತ್ವದ ರಾಷ್ಟ್ರಗಳ ಬದ್ರ ಬುನಾದಿಗೆ ಕಾಂಕ್ರಿಟ್ ಆಗಿ ಕೆಲಸ ಮಾಡುತ್ತಿದೆ. ಜನಪರ ಕೆಲಸ ಕಾರ್ಯಕ್ರಮಗಳನ್ನು ಆದರ್ಶದ ನೆಲೆಗಟ್ಟಿನಲ್ಲಿ ನೋಡಬೇಕಾಗಿರುವುದು ಮಾಧ್ಯಮದ ಕೆಲಸವಾಗಿದೆ. ಇಂತಹ ಮಾಧ್ಯಮಗಳು ಸಮಾಜದ ಕೇಂದ್ರಬಿಂದುವಾಗಿ ಕಾರ್ಯನಡೆಸುತ್ತವೆ.

ಮಾಧ್ಯಮಗಳಲ್ಲಿ ಪ್ರಮುಖವಾಗಿ ಪತ್ರಿಕಾ ಮಾಧ್ಯಮ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮವು ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಸಹಜವಾಗಿ ಇಂದು ಭಾರತದಂತಹ ದೇಶಗಳಿಗೆ ಎಲೆಕ್ಟ್ರಾನಿಕ್ ಮಾಧ್ಯಮವು ಅತಿ ಹೆಚ್ಚು ಜನರಿಗೆ ತಲಪುವ ಕೆಲಸ ಮಾಡುತ್ತದೆ. ಅವುಗಳಲ್ಲಿ ಸಿನಿಮಾ ಹಾಗೂ ಟಿವಿ ಮಾಧ್ಯಮಗಳು ಕೂಡ ಒಂದಾಗಿವೆ. ಆದರೆ ಲಿಂಗಾಧಾರಿತ ಸಮಾನತೆಯನ್ನು ತೋರಿಸುವಲ್ಲಿ ಈ ಮಾಧ್ಯಮಗಳು ವಿಫಲವಾಗುತ್ತಿವೆ.

ಸಿನಿಮಾ ಮಾಧ್ಯಮ ಮನುಕುಲದ ಅನೇಕ ಆಗುಹೋಗುಗಳ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರುತ್ತಿದೆ. ಇಂದು ಒತ್ತಡದ ಬದುಕಿನಲ್ಲಿ ಬದುಕುತ್ತಿರುವ ಮನುಷ್ಯನಿಗೆ ಮನರಂಜನೆಯ ಮಾಧ್ಯಮವಾಗಿ ಅತಿ ಜನಪ್ರಿಯವನ್ನು ಗಳಿಸಿಕೊಂಡಿದೆ.

ಭಾರತದಲ್ಲಿ ಆರಂಭದ ಸಿನಮಾ ಮಾಧ್ಯಮದಲ್ಲಿ, ರಾಮಾಯಣ ಮತ್ತು ಮಹಾಭಾರತದ ಪುರಾಣಗಳನ್ನು ಆಧರಿಸಿ ಹಲವಾರು ಚಿತ್ರಗಳನ್ನು ತೆಗೆಯಲಾಯಿತು. ಕಾಲನಂತರ ಸಾಮಾಜಿಕ ಚಲನಚಿತ್ರಗಳಿಗೆ ಹೆಚ್ಚಿನ ಮಹತ್ವವನ್ನು ನೀಡಲಾಯಿತು. ಈ ರೀತಿಯ ಅನುಭವದ ಆಧಾರದ ಮೇಲೆ ತೆಗೆದ ಕಲಾತ್ಮಕ ಮತ್ತು ಮಸಾಲ ಚಿತ್ರಗಳು ತಮ್ಮದೆ ಆದ ಪ್ರೇಕ್ಷಕರನ್ನು ಆಕರ್ಷಿಸಿದವು. ಇಂದು ಅತ್ಯಾಧುನಿಕ ತಂತ್ರಜ್ಞಾನಗಳಿಂದ ಕೂಡಿದ ಗ್ರಾಫಿಕ್ ಆಧಾರಿತ ಚಲನಚಿತ್ರಗಳು ಜಗತ್ತನ್ನು ಆಳ್ವಿಕೆ ನಡೆಸುತ್ತಿವೆ. ಅದಕ್ಕಾಗಿ ಬಹು ಪಾಲು ಸಿನಿಮಾಗಳು ಸಂಕೀರ್ಣವಾಗಿ ಬೆಳೆದು ಪ್ರೇಕ್ಷಕರನ್ನು ಸೆಳೆಯುವ ಪ್ರಯತ್ನವನ್ನು ನಡೆಸುತ್ತಿವೆ.

ಇಂತಹ ಸಿನಿಮಾ ಜಗತ್ತಿನಲ್ಲಿ ನಾಯಕಿಯರ ನಟನೆಗಿಂತ ಹೆಚ್ಚಾಗಿ ನಾಯಕರ ನಟನೆಗೆ ಹೆಚ್ಚಿನ ಮಹತ್ವವನ್ನು ಭಾರತೀಯ ಚಲನಚಿತ್ರ ರಂಗ ನೀಡುತ್ತಾ ಬಂದಿದೆ. ನಾಯಕಿ ಪ್ರಧಾನ ಚಿತ್ರಗಳು ಅತಿ ಕಡಿಮೆ ಹಾಗೂ ಯಶಸ್ಸಿನ ದೃಷ್ಟಿಯಿಂದ ಅವುಗಳು ಬೆರಳಣಿಕೆಯಷ್ಟು ಮಾತ್ರ ಆಗಿವೆ.

ಭಾರತದಲ್ಲಿ ನಾಯಕಿಯರಿಗಿಂತ ಹೆಚ್ಚಾಗಿ ನಾಯಕ ನಟರು ಹೆಚ್ಚಿನ ತಾರಾಮೌಲ್ಯಗಳನ್ನು ಹೊಂದಿದ್ದಾರೆ. ಒಂದು ಸಿನಿಮಾದಲ್ಲಿ ಯಶಸ್ವಿ ನಾಯಕನಾಗಿ ಹೊರಹೊಮ್ಮಿದರೆ ಮುಂದೆ ಅವನು ತನ್ನದೆ ಆದ ತಾರ ಮೌಲ್ಯಗಳನ್ನು ಹೊಂದುತ್ತಾನೆ. ಯಶಸ್ಸಿನ ಶಿಖರಕ್ಕೇರುತ್ತಾನೆ. ಆದರೆ ನಾಯಕಿಯರ ವಿಚಾರಕ್ಕೆ ಸೀಮಿತವಾಗಿ ನೋಡುವುದಾದರೆ ಅದು ಕೆಲವೆ ಕೆಲವು ವರ್ಷಗಳಿಗೆ ಸೀಮಿತವಾಗಿ ಮಾತ್ರ.

ನಟಿಯರು ತಮ್ಮ ಜನಪ್ರಿಯತೆಯನ್ನು ಕೆಲವು ವರ್ಷಗಳಲ್ಲಿ ಮಾತ್ರ ಮುಂದುವರೆಸುತ್ತಾರೆ. ಪುರುಷ ಜಗತ್ತಿನ ನಟನೆಯಲ್ಲಿ ನಟಿಯರ ಪಾತ್ರಗಳು ಗೌಣವಾಗುತ್ತವೆ. ಸಹಜವಾದ ಒಂದು ವಯಸ್ಸು ಮುಗಿದರೂ ಪುರುಷ ನಟರು ನವ ಯುವಕರಾಗಿಯೇ ಇರುತ್ತಾರೆ. ಐವತ್ತು ವರ್ಷ ದಾಟಿದರೂ ಅವರಿಗೆ ಇಪ್ಪತೊಂದರ ನಟಿಯರ ಜೊತೆ ನಟನೆ ಇರುತ್ತದೆ. ಒಂದು ವೇಳೆ ಮಹಿಳಾ ನಟನೆಗಾರ್ತಿಯರು ಮೂವತ್ತೈದು ವರ್ಷ ದಾಟುತ್ತಿದಂತೆ ತಾಯಿ ಪಾತ್ರಕ್ಕೆ ಸೀಮಿತವಾಗುತ್ತಾರೆ ಅಥವಾ ಸಿನಿಮಾ ಜಗತ್ತಿನಿಂದಲೇ ದೂರವಾಗಿಯೇ ಉಳಿಯುತ್ತಾರೆ.

ನಟಿಯರು ಕೆಲವೊಮ್ಮೆ ತಮ್ಮ ಜನಪ್ರಿಯತೆಗಾಗಿ ತಮ್ಮದೆ ಆದ ಹೋರಾಟ ನಡಿಸುತ್ತಾರೆ. ಉತ್ತುಂಗದಲ್ಲಿರುವ ನಟನು ಮಾಡುವ ಅವಿವೇಕತನದ ನಡೆಗಳಿಗೆ ನಟಿಯರು ದಾರಿಯಾಗುತ್ತಾರೆ. ಇತ್ತೀಚೆಗೆ 'ಮೀಟೂ ಅಭಿಯಾನ' ಒಂದು ಹೊಸ ಸಮಸ್ಯೆಯನ್ನು ಹುಟ್ಟು ಹಾಕಿತು. ಸತ್ಯಾಸತ್ಯೆಗಳಿಗಿಂತ ಹೆಚ್ಚಾಗಿ ಪ್ರಚಾರಗಳು ಅಧಿಕವಾದವು. ನಿಗೂಢ ಸತ್ಯಗಳು ಹಾಗೆಯೇ ಉಳಿದುಕೊಂಡವು. ಇಂತಹ ಗಾಸಿಫ್‌ಗಳು ಪತ್ರಿಕೆ ಮತ್ತು ಟಿವಿಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಪ್ರಚಾರಗಿಟ್ಟಿಸಿಕೊಂಡವು.

ಸಿನಿಮಾ ಮಾಧ್ಯಮದಲ್ಲಿ ಕಥಾ ಚಿತ್ರಗಳು ತಾರಾ ಮೌಲ್ಯಕ್ಕೆ ಅವಕಾಶ ಮಾಡಿಕೊಡುತ್ತವೆ. ನೋಡುಗರಲ್ಲಿ ತಮ್ಮದೇ ಆದ ಛಾಪನ್ನು ಬಿತ್ತುತ್ತವೆ. ವ್ಯಾಪಾರಿ ಮನಸ್ಸಿನ ಚಿತ್ರಗಳು ಸಹಜವಾಗಿ ಯಶಸ್ವಿಯಾಗುತ್ತವೆ. ಇಂತಹ ಸಂದರ್ಭದಲ್ಲಿ ವೈಯಕ್ತಿಕ ಕೆಲಸಗಳು ಹಿತಾಸಕ್ತಿಗಳು, ಚಿತ್ರಣ ಮತ್ತು ಪ್ರತಿಷ್ಟೆಗಳಿಗೆ ನಟಿಯರಿಗಿಂತ ಹೆಚ್ಚಾಗಿ ನಟರು ಹೋರಾಡುವ ಮೂಲಕ ಈ ಸಿನಿಮಾ ಕ್ಷೇತ್ರಗಳಲ್ಲಿ ಉಳಿಯಲು ಪ್ರಯತ್ನಿಸುತ್ತಾರೆ. ಇವರ ಮುಂದೆ ನಟಿಯರ ಹೋರಾಟ ಕ್ಷೀಣವಾಗುತ್ತಿದೆ.

ಕನ್ನಡ ಚಲನಚಿತ್ರರಂಗಕ್ಕೆ ಸೀಮಿತಗೊಳಿಸುವುದಾದರೆ, ರಾಜಕುಮಾರ್, ಅಂಬರೀಷ್, ವಿಷ್ಣುವರ್ಧನ್, ಶಂಕರ್‌ನಾಗ್‌ನಂತಹ ಮೇರು ನಟರ ಪಟ್ಟಿ ಕಾಣುತ್ತದೆ. ಅವರ ಬದುಕು ನಟನೆಗೆ ಸಿಕ್ಕಷ್ಟು ಪ್ರಚಾರ, ಅವರ ಕೊನೆಯುಸಿರಿನಲ್ಲೂ ಜೀವಂತವಾಗುತ್ತದೆ. ಹಾಗೆಯೇ ಮುಂದುವರೆದಂತೆ ಇಂತಹ ನಟರು ಜನಸಾಮಾನ್ಯರಲ್ಲಿ ಚಿರಸ್ಥಾಯಿಯಾಗಿ ಉಳಿದುಕೊಂಡು ಬಂದಿದ್ದಾರೆ. ಆದರೆ ಸ್ತ್ರೀ ಪಾತ್ರದ ನಟಿಯರಿಗೆ ಇಂತಹ ಅವಕಾಶಗಳು ಪ್ರಧಾನವಾಗಿ ಉಳಿಯಲಿಲ್ಲ. ಅದಕ್ಕೆ ಕಾರಣವಾದರೂ ಏನು ? ಎಂಬ ಪ್ರಶ್ನೆಗೆ ಉತ್ತರ ಹುಡುಕ ಹೊರಟರೆ ಪುರುಷ ಸಮಾಜದ ಅಲಿಖಿತ ನಿಯಮವೆ ಹೊರತು ಸ್ತ್ರೀ ಸಮಾಜವಲ್ಲ.

ಸಿನಿಮಾ ಮಾಧ್ಯಮದಂತೆ ಇಂದು ಟಿವಿ ಮಾಧ್ಯಮ ಜಗತ್ತು ಕೂಡ ವಿಸ್ತಾರವಾಗಿ ಬೆಳೆದಿದೆ. ಪುರುಷ ಪ್ರಧಾನ ಧಾರವಾಹಿಗಳಿಗಿಂತ ಹೆಚ್ಚಾಗಿ ಸ್ತ್ರೀ ಪ್ರಧಾನ ಧಾರವಾಹಿಗಳು ಹೆಚ್ಚಾಗಿ ಬಿತ್ತರಗೊಳ್ಳುತ್ತಿವೆ. ದುರಂತವೆಂದರೆ ಈ ಮಾಧ್ಯಮ ಜಗತ್ತಿನಲ್ಲೂ ಸ್ತ್ರೀಯನ್ನು ವ್ಯವಸ್ಥಿತವಾಗಿ ದ್ವಿತೀಯ ದರ್ಜೆ ಪ್ರಜೆಯಾಗಿಯೆ ಕಾಣಿಸುತ್ತಿದ್ದಾರೆ. ಇಲ್ಲೂ ಕೂಡ ವ್ಯಾಪಾರಿ ಮನಧೋರಣೆಯ ನಿರ್ಮಾಪಕರು-ನಿರ್ದೇಶಕರು ಹೆಚ್ಚಾಗಿ ಇರುವುದೇ ಕಾರಣವಾಗಿದೆ.

ಸ್ತ್ರೀಯನ್ನು ಅಪರಾಧಿಯಾಗಿ ತೋರಿಸುವ ಬಹುಪಾಲು ಟಿವಿ ಮಾಧ್ಯಮವು ಆಕೆಯನ್ನು ಜಾಹೀರಾತಿನಲ್ಲಿ ಮಾತ್ರ ಪ್ರಧಾನವಾಗಿ ತೋರಿಸಿ ಸೌಂದರ್ಯ ಪ್ರಜ್ಞೆಯ ಹೆಸರಿನಲ್ಲಿ, ಮಾರುಕಟ್ಟೆಯ ವಸ್ತುವಾಗಿ ನೋಡುವು ಸನ್ನಿವೇಶಗಳು ಹೆಚ್ಚಾಗಿವೆ. ಪುರುಷ ಸೌಂದರ್ಯಕ್ಕಿಂತ ಹೆಚ್ಚಾಗಿ ಸ್ತ್ರೀ ಸೌಂದರ್ಯದ ಪ್ರಜ್ಞೆ ತೋರಿಸುವ ಟಿವಿ ಮಾಧ್ಯಮವು ಮತ್ತೊಂದು ಭಾಗದಲ್ಲಿ ಹೆಣ್ಣನ್ನು ಕ್ರೂರಿಯಾಗಿ ತೋರಿಸುವ ದುಸ್ಸಾಹಸಕ್ಕೆ ಕೈ ಹಾಕುತ್ತಿದೆ.

ಭಾರತದ ಮಟ್ಟಿಗೆ ಸಿನಿಮಾ ಮತ್ತು ಟಿವಿ ಮಾಧ್ಯಮಗಳಲ್ಲಿ ಪ್ರೀತಿ, ಪ್ರೇಮ, ಕಾಮದ ವಿಚಾರಗಳಿಗೆ ಬಂದಾಗ ಪುರುಷನಿಗೆ ಸಿಗುವ ಸ್ವಾತಂತ್ರ್ಯ ಸ್ತ್ರೀಗೆ ತುಸು ಕಡಿಮೆಯೇ ಎನಿಸುತ್ತದೆ. ಒಂದು ವೇಳೆ ಪುರುಷನು ಕಾಮದ ವಿಚಾರಕ್ಕೆ ಮುಂದಾದರೆ ಅದು ಆಕಸ್ಮಿಕ ಕೆಲವೊಮ್ಮೆ

ಅನಿವಾರ್ಯವಾಗುತ್ತದೆ. ಸಾಧ್ಯವಾದರೆ ಅಂತಹ ನಟನು ತ್ಯಾಗಮಯಿಯಾಗಿ ಕಾಣಿಸುಕೊಳ್ಳುತ್ತಾನೆ. ಪ್ರೇಕ್ಷಕರ ಮಟ್ಟಿಗೆ ಅತನು ನಿಜವಾದ ನಾಯಕನಾಗಿಯೇ ಕಾಣುತ್ತಾನೆ. ಇದೇ ರೀತಿಯ ನಟನೆ ಸ್ತ್ರೀಯ ಮೂಲಕ ನೋಡುವುದಾದರೆ ಆಕೆ ಸಮಾಜ ಕಂಟಕಿಯಾಗಿ ಕಾಣಿಸುತ್ತಾಳೆ. ಅವಳಿಗೆ ಮತ್ತೊಬ್ಬ ಪುರುಷ ಏನಾದರೂ ಆಸರೆ ನೀಡಿದರೆ ಅವನು ಮಹಾನ್ ನಾಯಕನಾಗಿ ಕಾಣಿಸುತ್ತಾನೆಯೇ ಹೊರತು ಸ್ತ್ರೀ ಗೌಣವಾಗುತ್ತಾಳೆ. ವಿಚಿತ್ರವೆಂದರೆ ಪ್ರಕೃತಿಯಲ್ಲಿ ಸ್ತ್ರೀ-ಪುರುಷ ಸರಿಸಮಾನತೆಯನ್ನು ಇಂತಹ ಮಾಧ್ಯಮಗಳು ಸಮಾಜದ ಕೇಂದ್ರಬಿಂದುಗಳಾಗಿ ಹಾಳುಮಾಡುತ್ತಿವೆ. ಪುರುಷ ಯಜಮಾನಿಕೆಯಲ್ಲಿ ಸ್ತ್ರೀಯು ಅಸಹಾಯಕಳಾಗಿ ಕಾಣುತ್ತಾಳೆ.

ಸಿನಿಮಾ ಮತ್ತು ಟಿವಿ ಮಾಧ್ಯಮಗಳು ವ್ಯವಸ್ಥಿತವಾಗಿ ಸ್ತ್ರೀ ಪ್ರಧಾನವಾದ ವಿಚಾರಗಳಿಗೆ ಕೊಕ್ಕೆ ಹಾಕುತ್ತವೆ. ಕೆಲವೊಮ್ಮೆ ಸ್ತ್ರೀ ಪ್ರಧಾನವಾದ ನಿರೂಪಣೆ ಮತ್ತು ಜಾಹೀರಾತುಗಳಲ್ಲಿ ಕಾಣಿಸಿಕೊಂಡರೆ ಅದು ಕೇವಲ ವ್ಯಾಪರ ಮನಸ್ಥಿತಿಯಿಂದ ಹೊರತು, ಲಿಂಗ ಸಮಾನತೆಯಂತೂ ಅಲ್ಲ. ಕಾಣದ ವ್ಯವಸ್ಥೆಯು ಸ್ತ್ರೀಯನ್ನು ಬಲಿಪಶುವನ್ನಾಗಿ ಮಾಡಲು ಮುಂದಾಗುತ್ತದೆಯೇ ಹೊರತು ಸ್ತ್ರೀ-ಪುರುಷರ ಸರಿ ಸಮಾನತೆಯು ಆರೋಗ್ಯ ಸಮಾಜದ ಉತ್ತಮ ಬೆಳವಣಿಗೆಯೆಂಬುದನ್ನು ಮರೆಯುತ್ತದೆ.

ಪುರುಷ ಸಮಾಜದಲ್ಲಿ ವ್ಯಕ್ತಿಯ ಆರಾಧನೆ, ಆರಾಧನೆಯ ಅಂಧಶ್ರದ್ಧೆ, ಹಾಗೂ ಜನಜಂಗೂಲಿಯ ಮನಸ್ಥಿತಿಯ ವೀಕ್ಷಕ ಮನಸ್ಥಿತಿಯೂ ಕೂಡ ಅಪಾಯಕಾರಿಯಾಗಿರುತ್ತದೆ. ವಿಚಾರಗಳಿಗಿಂತ, ವ್ಯಕ್ತಿಯ ಆರಾಧನೆ ನಿಜಕ್ಕೂ ಕೂಡ ಆತಂಕವನ್ನು ಉಂಟುಮಾಡುತ್ತದೆ. ನಟನಿಗಾಗಿ ಹಾಗು ನಟನೆಯ ಸಿನಿಮಾಕ್ಕೆ ರಕ್ತ, ಕಿಡ್ನಿಗಳನ್ನು ನೀಡುವ ವಿಲಕ್ಷಣ ಪ್ರೇಕ್ಷಕರು ಸಮಾಜಕ್ಕೆ ಮಾರಕರಾಗುತ್ತಾರೆ.

ಒಟ್ಟಾರೆಯಾಗಿ ಪುರುಷ ನಟನೆಗಾರರು, ಪ್ರೇಕ್ಷಕರನ್ನು ಭಾವನಾತ್ಮಕವಾಗಿ ಬಿಗಿ ಹಿಡಿಯುವ ಕೆಲಸ ಮಾಡುತ್ತಾರೆ. ಆ ಪ್ರೇಕ್ಷಕರಲ್ಲಿ ಸ್ತ್ರೀಯರು ಕೂಡ ಇರುತ್ತಾರೆಯೆಂಬುದು ವ್ಯವಸ್ಥೆಯ ವ್ಯಂಗ್ಯವಾಗಿದೆ.ಇಂತಹ ಪಾತ್ರಗಳು ಮತ್ತು ಇವುಗಳನ್ನು ಅತಿರೇಕವಾಗಿ ತೋರಿಸುವ ಮಾಧ್ಯಮಗಳು ಪ್ರಜಾಪ್ರಭುತ್ವದ ಆಶಯಕ್ಕೆ ಧಕ್ಕೆಯನ್ನು ತರುತ್ತವೆ. ಇವುಗಳನ್ನು ನೋಡಿದ ಪ್ರೇಕ್ಷಕನು ಸಮೂಹ ಸನ್ನಿಯಂತಹ ವಿಲಕ್ಷಣ ನಡವಳಿಕೆಗಳಿಗೆ ಅವಕಾಶ ಮಾಡಿಕೊಡುತ್ತವೆ. ಶೈಕ್ಷಣಿಕ ಜಗತ್ತು ಮತ್ತು ನಾಗರೀಕ ಜ್ಞಾನದ ಜಗತ್ತಿನಲ್ಲಿ ಬದುಕುತ್ತಿರುವ ವ್ಯಕ್ತಿಗಳು ಇದರ ಸತ್ಯಾಸತ್ಯತೆಗಳನ್ನು ಪರಿಶೀಲಿಸುವುದು ಅಗತ್ಯವಾಗಿದೆ. ಅದು ಅನಿವಾರ್ಯ ಕೂಡ.

## ಪರಮಾರ್ಶನ ಗ್ರಂಥಗಳು


1. ಪ್ರಜಾವಾಣಿ ಪತ್ರಿಕೆ – ಮಹಿಳಾ ಜಗತ್ತು.
2. ನಿಯತಕಾಲಿಕೆಗಳು
3. ಸಿನಿಮಾ ಪುರಾವಾಣಿಗೆ.